**<u>ಸಾಕ್ಷಿಯನ್ನು ಈ ದಿನ ದಿಃ 29.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರಿದ **ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**</u>

1. ಆ ಸ್ಥಳದಲ್ಲಿ ಮಹಜರ್ ಮಾಡಿದ ನಂತರ ಪೋಲೀಸರು ಪಕ್ಕದಲ್ಲೇ ಇದ್ದ ಮಾಹೀ ಟೀ ಸ್ಟಾಲ್ ನಲ್ಲಿ ಅಳವಡಿಸಲಾಗಿದ್ದ ಸಿಸಿ ಕ್ಯಾಮರಾವನ್ನು ಪರಿಶೀಲಿಸಲು ಕರೆದುಕೂಂಡು ಹೋದರು. ಆ ಟೀ ಸ್ಟಾಲ್ ನ ಮಾಲೀಕ ಶ್ಯಾಮ್ ಲಾಲ್ ಎಂದು. ಆ ಟೀ ಸ್ಟಾಲ್ ನಲ್ಲಿ ಒಟ್ಟು 4 ಸಿಸಿ ಕ್ಯಾಮರಾಗಳು ಇದ್ದವು. ಅವುಗಳಲ್ಲಿ ಮುಂದಿನ ಎರಡೂ ಕಡೆಗಳಲ್ಲಿ ಇದ್ದಂತಹ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿದರು. ಅದರಲ್ಲಿ ಆರೋಪಿ ಆ ಟೀ ಸ್ಟಾಲ್ ಗೆಬಂದು ಖರೀದಿಸಿದ ಬಾಬ್ತು ಮತ್ತು ಅಲ್ಲಿ ಓಡಾಡಿದ ಬಾಬ್ತು ಕಂಡು ಬಂತು. ಆ ಟೀ ಸ್ಟಾಲ್ ನ ಮಾಲೀಕ ಶ್ಯಾಮ್ ಲಾಲ್ ರವರು ಈತ 5 ರೂಪಾಯಿ ಕೊಟ್ಟು ಬೀಡಿಯನ್ನು ಖರೀದಿಸಿದ್ದ ಎಂದು ಹೇಳಿದ. ನಂತರ ತನಿಖಾಧಿಕಾರಿ **Screen shot** ಗಳನ್ನು ತೆಗೆದುಕೊಂಡರು. ಮತ್ತು ಅಲ್ಲಿದ್ದ ದೃಶ್ಯಾವಳಿಗಳನ್ನು **Pen drive** ಗೆ ವರ್ಗಾಯಿಸಿಕೊಂಡರು. ನಂತರ ಅಲ್ಲಿ ಬರವಣಿಗೆಯನ್ನು ಮಾಡಿ ನನಗೆ ಓದಿ ಹೇಳಿ ನನ್ನ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಈಗ ನಿಪಿ 10 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 10(ಎ) ಎಂತಲು ಗುರುತುಪಡಿಸಿಕೂಳ್ಳಲಾಯಿತು. ಆ ಸಮಯದಲ್ಲಿ ತನಿಖಾಧಿಕಾರಿಯವರು ಪೋಟೋಗಳನ್ನು ತೆಗೆದರು. ಆ ಪೋಟೋಗಳಲ್ಲಿ ನಾನು ಇದ್ದೇನೆ. ಅವುಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಸದರಿ ಎರಡು ಪೋಟೋಗಳನ್ನು ಈಗ ನಿಪಿ 11 ಮತ್ತು 12 ಎಂದು ಗುರುತುಪಡಿಸಿಕೊಳ್ಳಲಾಯಿತು. ಈ ಮಹಜರ್ ನ್ನು ಬೆಳಿಗ್ಗೆ

10.45 ರಿಂದ ಮಧ್ಯಾಹ್ನ 01.45 ರವರೆಗೆ ಮಾಡಿದರು. ನಂತರ ಆ ವ್ಯಕ್ತಿ / ಗಾಯಾಳು ಸುಮಾರು 5-6 ದಿನಗಳ ನಂತರ ಮೃತ ಪಟ್ಟ ಎನ್ನುವುದು ತಿಳಿದು ಬಂತು.

2. ನಂತರ ಒಂದು ತಿಂಗಳು ಕಳೆದ ಮೇಲೆ ನನ್ನನ್ನು ಪೋಲೀಸರು ಮೈಸೂರಿನ ಹೊಸ ನ್ಯಾಯಾಲಯಗಳ ಸಂಕೀರ್ಣಕ್ಕೆ ಕರೆದುಕೂಂಡು ಹೋಗಿದ್ದರು. ಅಲ್ಲಿ ನ್ಯಾಯಾಧೀಶರ ಮುಂದೆ ನಾನು ನೋಡಿದ್ದನ್ನು ಹೇಳಿರುತ್ತೇನೆ. ಆ ನನ್ನ ಹೇಳಿಕೆಗೆ ಸಹಿ ಹಾಕಿರುತ್ತೇನೆ. (ಈಗ ನ್ಯಾಯಾಲಯದ ಮುಂದೆ ಮೊಹರು ಮಾಡಿದ್ದ ಕವರ್ ನಿಂದ ಕಲಂ 164 ಸಿ ಆರ್ ಪಿ ಸಿ ಅಡಿಯಲ್ಲಿ ದಾಖಲಿಸಿದ್ದ ಒಟ್ಟು 3 ಸಾಕ್ಷಿದಾರರ ಹೇಳಿಕೆಗಳನ್ನು ಹೊರ ತೆರೆಯಲಾಯಿತು.) ಅದರಲ್ಲಿ ಪ್ರಸ್ತುತ ಸಾಕ್ಷಿಯ ಹೇಳಿಕೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿ ಅದರ ಮೇಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಹೇಳಿಕೆಯನ್ನು ಈಗ ನಿಪಿ 13 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 13(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

3. ತನಿಖಾಧಿಕಾರಿಯವರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. (ಈಗ ನ್ಯಾಯಾಲಯದ ಮುಂದೆ, ಮೊಹರು ಮಾಡಿದ್ದ ಒಟ್ಟು 9 ಬಿಳಿಯ ಪ್ರತ್ಯೇಕ ಬಟ್ಟೆಗಳ ಬ್ಯಾಗ್ ನಿಂದ ಅಮಾನತ್ತು ಪಡಿಸಿಕೂಂಡಿದ್ದ ವಸ್ತುಗಳನ್ನು ಹೊರ ತೆಗೆಯಲಾಯಿತು.) ಸಾಕ್ಷಿ ಒಂದು ಕಪ್ಪು ಕೆಂಪು ಹಸಿರು ಬಣ್ಣದ , ಒಂದು ರಕ್ತಸಿಕ್ತ ಟವೆಲ್ ನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 1 ಎಂದು ಗುರುತುಪಡಿಸಿಕೂಳ್ಳಲಾಯಿತು. ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಇರುವ ಮಾದರಿ ಮಣ್ಣನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 2 ಎಂದು ಗುರುತುಪಡಿಸಿಕೂಳ್ಳಲಾಯಿತು. ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಇರುವ ರಕ್ತ ಸಹಿತ ಮಣ್ಣನ್ನು ನೋಡಿ ಗುರುತಿಸಿರುತ್ತಾರೆ.

ಅದನ್ನು ಎಂ ಒ 3 ಎಂದು ಗುರುತುಪಡಿಸಿಕೂಳ್ಳಲಾಯಿತು. ಸಾಕ್ಷಿ , ಒಂದು ನೀಲಿ , ಕಪ್ಪ ಬಿಳಿ ಬಣ್ಣಗಳ ರಕ್ತಮಯ ಲುಂಗಿ ಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 4 ಎಂದು ಗುರುತುಪಡಿಸಿಕೂಳ್ಳಲಾಯಿತು. ಸಾಕ್ಷಿ ಒಂದು ಜೊತೆ ಕಪ್ಪ ಬಣ್ಣದ ಲೂನಾರ್ ಚಪ್ಪಲಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 5 ಎಂದು ಗುರುತುಪಡಿಸಿಕೂಳ್ಳಲಾಯಿತು. ಸಾಕ್ಷಿ, ರಕ್ತದ ಕಲೆ ಇರುವ ತುಂಡಾದ ಸಿಮೆಂಟ್ ಇಟ್ಟಿಗೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 6 ಎಂದು ಗುರುತುಪಡಿಸಿಕೂಳ್ಳಲಾಯಿತು. ಸಾಕ್ಷಿ , ಒಂದು ಪ್ಲಾಸ್ಟಿಕ್ ಬಾಕ್ಸ್ ನಲ್ಲಿರುವ ಮಾದರಿ ಹತ್ತಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 7 ಎಂದು ಗುರುತುಪಡಿಸಿಕೂಳ್ಳಲಾಯಿತು. ಸಾಕ್ಷಿ, ಒಂದು ಪ್ಲಾಸ್ಟಿಕ್ ಬಾಕ್ಸ್ ನಲ್ಲಿರುವ ರಕ್ತ ಸಂಗ್ರಹಿಸಿದ ಹತ್ತಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 8 ಎಂದು ಗುರುತುಪಡಿಸಿಕೂಳ್ಳಲಾಯಿತು. ಸಾಕ್ಷಿ , ಒಂದು ಮರದ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. (ಈಗ ಮೊಹರು ಮಾಡಿದ ಬಿಳಿಯ ಬಟ್ಟೆಯಿಂದ ಸದರಿ ದೊಣ್ಣೆಯನ್ನು ಹೊರ ತೆಗೆದು ತೋರಿಸಲಾಗಿರುತ್ತದೆ) ಅದನ್ನು ಎಂ ಒ 9 ಎಂದು ಗುರುತುಪಡಿಸಿಕೂಳ್ಳಲಾಯಿತು.

4. ಮಾಹೀ ಟೀ ಸ್ಟಾಲ್ ನಲ್ಲಿ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿ ಅದರಲ್ಲಿದ್ದ ದೃಶ್ಯಾವಳಿಗಳನ್ನು **Pen drive** ಗೆ ಹಾಕಿಕೂಂಡಿದ್ದು ಸದರಿ **Pen drive** ನ್ನು ನೋಡಿದರೆ ಗುರುತಿಸುತ್ತೇನೆ. (ಈಗ ಮೊಹರು ಮಾಡಿದ ಬಿಳಿಯ ಬಟ್ಟೆಯ ಬ್ಯಾಗ್ ನಿಂದ **Pen drive** ನ್ನು ಹೊರ ತೆಗೆಯಲಾಯಿತು. ಸಾಕ್ಷಿ ಸದರಿ **Pen drive** ನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 10 ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ಸಿಸಿ

ಕ್ಯಾಮರಾದಿಂದ ತೆಗೆದಂತಹ **Screen shot** ಪೋಟೋಗಳನ್ನು ಈಗ ನೋಡುತ್ತಿದ್ದೇನೆ. (ಮೊಹರು ಮಾಡಿದ ಬಿಳಿಯ ಬಟ್ಟೆಯ ಬ್ಯಾಗ್ ನಿಂದ ಈಗ ಹೊರತೆಗೆಯಲಾಯಿತು)ಅವು ಒಟ್ಟು 4 ಪೋಟೋಗಳಿದ್ದು , ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ನಿಪಿ 14 ರಿಂದ 17 ಎಂದು ಗುರುತುಪಡಿಸಿಕೊಳ್ಳಲಾಯಿತು. (ಈಗ ಮೊಹರು ಮಾಡಿದ ಬಿಳಿಯ ಬಟ್ಟೆ ಬ್ಯಾಗ್ ನಿಂದ ಡಿವಿಆರ್ ನ್ನು ಹೊರ ತೆಗೆದು ಸಾಕ್ಷಿಗೆ ತೋರಿಸಲಾಯಿತು) ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ವ್ಯಕ್ತಿ ಅಂದರೆ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಆರೋಪಿಯನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ. **Screen shot** ಪೋಟೋಗಳಲ್ಲಿ ಹಳದಿ ಟೀ ಶರ್ಟ ಹಾಕಿ ಚೀಲ ಹಿಡಿದುಕೊಂಡಿರುವ ವ್ಯಕ್ತಿ ಆಗಿರುತ್ತಾನೆ. ಈ ಹಂತದಲ್ಲಿ ಸಾಕ್ಷಿಗೆ **Pen drive** ನ್ನು ನ್ಯಾಯಾಲಯದ **System** ಗೆ ಅಳವಡಿಸಿ ದೃಶ್ಯಾವಳಿಗಳನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ಹಳದಿ ಬಣ್ಣದ ಟೀ ಶರ್ಟ ಹಾಕಿ ಬೀಡಿ ಖರೀದಿಸಿದ ವ್ಯಕ್ತಿಯೇ ಆರೋಪಿ ಎಂದು ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**